# ಮಾಹಿತಿ ಆಯುಕ್ತರ ಸೇವಾವಧಿ 5ರ ಬದಲು 3 ವರ್ಷಕ್ಕೆ ಕಡಿತ

## ಆಯುಕ್ತರ ವೇತನ, ಇತರೆ ಭತ್ಯೆ ನಿರ್ಧರಿಸುವ ಹೊಣೆ ಸಂಸತ್ತಿನ ಬದಲು ಸರ್ಕಾರಕ್ಕೆ

• **ಪಿಟಿಐ** ನವದೆಹಲಿ

ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ನಿಯಮಗಳಿಗೆ ಮಹತ್ವದ ಬದಲಾವಣೆಗಳನ್ನು ತಂದು ಗುರುವಾರ ರಾತ್ರಿ ಅಧಿಸೂಚನೆ ಹೊರಡಿಸಿದೆ. ಈ ಪ್ರಕಾರ, ಕೇಂದ್ರೀಯ ಮಾಹಿತಿ ಆಯೋಗ (ಸಿಐಸಿ) ಆಯುಕ್ತರ ಅವಧಿ ದೇಶಾದ್ಯಂತ ಅನ್ವಯವಾಗುವಂತೆ 3 ವರ್ಷಕ್ಕೆ ಇಳಿಯಲಿದೆ. ಇನ್ನು ಅವರ ವೇತನವನ್ನು ಸಂಸತ್ತಿನ ಬದಲು ಸರ್ಕಾರವೇ ನಿರ್ಧರಿಸಲಿದೆ.




ಕಳೆದ ಜುಲೈನಲ್ಲೇ ಮಾಹಿತಿ ಹಕ್ಕು ಕಾಯ್ದೆ-2005ಕ್ಕೆ ತಿದ್ದುಪಡಿ ತಂದಿದ್ದ ಕೇಂದ್ರ ಸರ್ಕಾರ, 'ಮಾಹಿತಿ ಹಕ್ಕು ನಿಯಮಗಳು-2019'ನ್ನು ಜಾರಿಗೆ ತರಲು ನಿರ್ಧರಿಸಿತ್ತು. ಕೇಂದ್ರ ಚುನಾವಣಾ ಆಯುಕ್ತರು ಹಾಗೂ ರಾಜ್ಯ ಚುನಾವಣಾ ಆಯುಕ್ತರ ರೀತಿಯಲ್ಲೇ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಇತರ ರಾಜ್ಯ ಮಾಹಿತಿ ಆಯುಕ್ತರು ಅನುಭವಿಸುತ್ತಿದ್ದ ಸಮಾನ ಅಧಿಕಾರಕ್ಕೆ ತಿದ್ದುಪಡಿಯಲ್ಲಿ ತೆರೆ ಹಾಕಿತ್ತು. ಈಗ ಅಧಿಸೂಚನೆ ಮೂಲಕ ತನ್ನ ನಿರ್ಧಾರವನ್ನು ಸರ್ಕಾರ ಜಾರಿಗೊಳಿಸಿದೆ.

ಕೇಂದ್ರ ಸರ್ಕಾರದ ಈ ತೀರ್ಮಾನ ಮಾಹಿತಿ ಹಕ್ಕು ಕಾರ್ಯಕರ್ತರು ಹಾಗೂ ಪ್ರತಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದ್ದು, 'ಮಾಹಿತಿ ಹಕ್ಕು ಆಯೋಗದ ಸ್ವಾಯತ್ತೆ ಹಾಗೂ ಸ್ವಾತಂತ್ರ್ಯದ ಮೇಲೆ ಮಾಡಿದ ಹಲ್ಲೆ ಇದು' ಎಂದು ಆರೋಪಿಸಿದ್ದಾರೆ.

- **ಸರ್ಕಾರದಿಂದ ತಿದ್ದುಪಡಿ ನಿಯಮಗಳ ಅಧಿಸೂಚನೆ ಪ್ರಕಟ**
- **ಕೇಂದ್ರದ ನಿರ್ಧಾರದ ವಿರುದ್ಧ ಆರ್‌ಟಿಐ ಕಾರ್ಯಕರ್ತರ ಆಕ್ರೋಶ**
- **'ಇದು ಸಂಸ್ಥೆಯ ಸ್ವಾಯತ್ತೆ ಮತ್ತು ಸ್ವಾತಂತ್ರ್ಯದ ಮೇಲೆ ನಡೆಸಿದ ಹಲ್ಲೆ': ಕಾರ್ಯಕರ್ತರು**

### ವಿರೋಧ ಏಕೆ?

ಮಾಹಿತಿ ಹಕ್ಕು ಆಯುಕ್ತರ ಮೇಲೆ ಒತ್ತಡ ಹೇರುವ ಮೂಲಕ ಸರ್ಕಾರಗಳು ತಮ್ಮ ಆಶಯವನ್ನು ಪೂರೈಸಿಕೊಳ್ಳಬಹುದು. ತಮ್ಮ ಮಾತು ಒಪ್ಪದ ಆಯುಕ್ತರಿಗೆ ಹುದ್ದೆ ಅವಧಿ ಕಡಿತ, ವೇತನ ಕಡಿತ ಮೊದಲಾದ ಬೆದರಿಕೆ ಹಾಕಬಹುದು ಎಂಬುದು ವಿಪಕ್ಷಗಳ ಆರೋಪ.

### ಹೊಸ ನಿಯಮಗಳೇನು?

- ಮಾಹಿತಿ ಆಯುಕ್ತರ ವೇತನ, ಭತ್ಯೆ ಹಾಗೂ ಸೇವಾ ಷರತ್ತುಗಳನ್ನು ಬದಲಿಸುವ ಅಧಿಕಾರಗಳನ್ನು ಸರ್ಕಾರವೇ ಇಟ್ಟುಕೊಳ್ಳಲಿದೆ.
- ಕೇಂದ್ರೀಯ ಮಾಹಿತಿ ಆಯುಕ್ತರ ವೇತನ ಮಾಸಿಕ 2.50 ಲಕ್ಷ ರು. ಇರಲಿದೆ. ಇತರ ಮಾಹಿತಿ ಆಯುಕ್ತರ ವೇತನ 2.25 ಲಕ್ಷ ರು. ಇರಲಿದೆ. ವೇತನವನ್ನು ಸರ್ಕಾರವೇ ನಿರ್ಧರಿಸಲಿದೆ. ಈ ಮುನ್ನ ಸುಪ್ರೀಂ ಕೋರ್ಟ್ ಜಡ್ಜ್‌ಗಳು, ಚುನಾವಣಾ ಆಯುಕ್ತರ ವೇತನದ ರೀತಿಯಲ್ಲಿ ಮಾಹಿತಿ ಹಕ್ಕು ಆಯುಕ್ತರ ವೇತನವನ್ನು ಸಂಸತ್ತು ನಿರ್ಧರಿಸಬೇಕಿತ್ತು.
- 2005ರ ನಿಯಮದ ಪ್ರಕಾರ ಮಾಹಿತಿ ಆಯುಕ್ತರ ಸೇವಾ ಅವಧಿ 5 ವರ್ಷ ಆಗಿತ್ತು. 5 ವರ್ಷ ತುಂಬುವ ಮೊದಲೇ ಅವರ ವಯಸ್ಸು 65 ಮುಗಿಯುತ್ತಿದ್ದರೆ, ನಿವೃತ್ತಿ ಹೊಂದಬೇಕಿತ್ತು. ಆದರೆ ಈಗ ಅವಧಿಯನ್ನು 3 ವರ್ಷಕ್ಕೆ ಇಳಿಸಲಾಗಿದೆ.

### ಆರ್‌ಟಿಐ ಕಾರ್ಯಕರ್ತರ ಆಕ್ರೋಶ

ಸರ್ಕಾರವು ಮಾಹಿತಿ ಹಕ್ಕು ನಿಯಮವನ್ನು ಹೇಳದೇ ಕೇಳದೇ ಬದಲಿಸಿದೆ. ಬದಲಾವಣೆ ಮುನ್ನ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಬೇಕಿತ್ತು. ಮಾಹಿತಿ ಆಯುಕ್ತರ ಸ್ವಾಯತ್ತೆ, ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲಿದೆ. ಸರ್ಕಾರದ ಕೈಗೊಂಬೆಯಾಗುವ ಅಪಾಯವಿದೆ.

• **ಮಾಹಿತಿ ಹಕ್ಕು** ಕಾರ್ಯಕರ್ತರು